ಅಧ್ಯಕ್ಷರು : ಅನರ್ಹಗೊಂಡಿರುವ ಸದಸ್ಯರು ದಯವಿಟ್ಟು ಸದನದಿಂದ ನಿರ್ಗಮಿಸಬೇಕು.

(ಗೊಂದಲ)

ಅಧ್ಯಕ್ಷರು : ಅನರ್ಹಗೊಂಡ ಸದಸ್ಯರು ಸದನದಲ್ಲಿ ಇದ್ದಲ್ಲಿ ಸದನದಿಂದ ನಿರ್ಗಮಿಸಬೇಕೆಂದು ಅಂತಿಮವಾಗಿ ಮತ್ತೊಮ್ಮೆ ಆದೇಶಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾವವನ್ನು ಮಂಡಿಸುವುದು.

(ಗೊಂದಲ)

2. ವಿಶ್ವಾಸಮತ ಪ್ರಸ್ತಾಪ :

ವಿಷಯ : ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ರವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುವ ಬಗ್ಗೆ.

(ವಿರೋಧ ಪಕ್ಷದ ಸದಸ್ಯರುಗಳಿಂದ ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

"ಈ ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ".

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ಈ ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ".

(ಗೊಂದಲ)

ಅಧ್ಯಕ್ಷರು : ಪ್ರಸ್ತಾವವು ಅಂಗೀಕೃತವಾಯಿತು.

(ಪ್ರಸ್ತಾವವು ಧ್ವನಿಮತದಿಂದ ಅಂಗೀಕೃತವಾಯಿತು)

(ವಿರೋಧ ಪಕ್ಷದ ಸದಸ್ಯರುಗಳಿಂದ ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವನ್ನು ಬೆಳಿಗ್ಗೆ 10.10 ಗಂಟೆಗೆ ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಯಿತು)

* * * * *